INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -6, November-December, 2025
Page No,07-15
Peer -Reviewed, Refereed Journal

# ಕನ್ನಡ ಸಾಹಿತ್ಯಕ್ಕೆ ಹನೂರು ತಾಲ್ಲೂಕಿನ ಕೊಡುಗೆ

* ಪವನ್‌ಕುಮಾರ್ ಎಸ್.[1]
**ಪ್ರೊ.ಎಂ.ಜಿ.ಮಂಜುನಾಥ.[2]

ಹನೂರು ತಾಲ್ಲೂಕು ಸಾಹಿತ್ಯ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ತುಂಬಾ ಗಮನಾರ್ಹವಾದುದಾಗಿದೆ. ಜನಪದ ಮತ್ತು ಶಿಷ್ಟ ಸಾಹಿತ್ಯಗಳೆರಡರಲ್ಲೂ ಈ ತಾಲ್ಲೂಕಿನ ಕವಿಗಳು ತಮ್ಮದೆ ಆದಂತಹ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಈ ಎರಡೂ ಪ್ರಕಾರಗಳಲ್ಲೂ ಸತ್ವಯುತವಾದ ಮಹತ್ವದ ಕೃತಿಗಳನ್ನು ರಚಿಸಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ಜಗತ್ತಿನ ಜನಪದ ಮಹಾಕಾವ್ಯಗಳಲ್ಲಿ ಒಂದಾದ 'ಫಿನ್‌ಲ್ಯಾಂಡಿನ ಕಲೆವಾಲ'ದಷ್ಟೇ ಮಹತ್ವವನ್ನು ಪ್ರಸಿದ್ಧಿಯನ್ನು ಹೊಂದಿರುವ ಮಲೇಮಹದೇಶ್ವರ, ಮಂಟೇಸ್ವಾಮಿ ಮಹಾಕಾವ್ಯಗಳು ಈ ತಾಲ್ಲೂಕಿನಲ್ಲಿ ಕಂಡುಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ. ಜನಪದ ಸಾಹಿತ್ಯದಷ್ಟೇ ಹೊಸಗನ್ನಡ ಸಾಹಿತ್ಯವು ವಿಫುಲವಾಗಿ ಬೆಳೆದಿದ್ದು, ಈ ತಾಲ್ಲೂಕಿನಲ್ಲಿ ಸಾಹಿತ್ಯವು ಸಮೃದ್ಧವಾಗಿ ಬೆಳೆದಿದೆ. ಇಲ್ಲಿನ ಪ್ರಮುಖ ಸಾಹಿತಿಗಳಾದ ಕೃಷ್ಣಮೂರ್ತಿ ಹನೂರು, ಹನೂರು ಚೆನ್ನಪ್ಪ, ಸ್ವಾಮಿ ಪೊನ್ನಾಚಿ, ಬಸವರಾಜ ದೊಡ್ಡಟ್ಟಿ, ಬಿ. ಚಿಕ್ಕಬಸವಯ್ಯಮಣಗಳ್ಳಿ, ಡಿ. ಮಹದೇವ ಕುಮಾರ್, ಜಿ. ಪಳನಿಸ್ವಾಮಿ ಜಾಗೇರಿ, ಜಯಪ್ರಕಾಶ ಪಿ. ಪೊನ್ನಾಚಿ, ಕೇಶವಪ್ರಸಾದ್ ಕೆ ಹೀಗೆ ಇಂದು ಈ ತಾಲ್ಲೂಕಿನ ಸಾಹಿತಿಗಳ ಪಟ್ಟಿ ವಿಸ್ತರಿಸಿದ್ದು, ಸಂಶೋಧನಾ ವ್ಯಾಪ್ತಿಗೆ ಒಳಪಡಿಸಬಹುದಾದಷ್ಟು ವಿಫುಲವಾದ ಸಾಹಿತ್ಯ ಇಲ್ಲಿ ರಚನೆಯಾಗಿದೆ.

ಹನೂರು ತಾಲ್ಲೂಕಿನಲ್ಲಿ ಹೊಸಗನ್ನಡ ಸಾಹಿತ್ಯವು ಶಿಷ್ಟಪ್ರಕಾರಗಳಾದ ನಾಟಕ, ಕಾವ್ಯ, ಸಣ್ಣಕಥೆ, ಪ್ರಬಂಧ, ಕಾದಂಬರಿ, ವಿಮರ್ಶೆ ಸಾಹಿತ್ಯದಲ್ಲೂ ಮಹತ್ವವಾದ ಕೃತಿಗಳನ್ನು ಹೊಂದಿರುವುದನ್ನು ಕಾಣಬಹುದು. ಈ ಎಲ್ಲಾ ಪ್ರಕಾರಗಳಲ್ಲೂ ತಾಲ್ಲೂಕಿನ ಲೇಖಕರು ಸಾಹಿತ್ಯ ರಚನೆಯಲ್ಲಿ

[1].ಸಂಶೋಧನಾ ವಿದ್ಯಾರ್ಥಿ,ಕನ್ನಡ ವಿಭಾಗ,ಸ್ನಾತಕೋತ್ತರ ಕೇಂದ್ರ,ಮೈಸೂರು ವಿಶ್ವವಿದ್ಯಾನಿಲಯ,ಹೇಮಗಂಗೋತ್ರಿ,ಹಾಸನ.
[2].ಪ್ರಾಧ್ಯಾಪಕರು,ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ,ಹೇಮಗಂಗೋತ್ರಿ,ಹಾಸನ.

ತೊಡಗಿಕೊಂಡಿದ್ದು, ಸಂಖ್ಯಾ ದೃಷ್ಟಿಯಿಂದ ಅಲ್ಲದೇ ಸತ್ವದ ದೃಷ್ಟಿಯಿಂದಲೂ ಈ ಭಾಗದ ಕೃತಿಗಳು ಮೇಲ್ಪಂಕ್ತಿಯಲ್ಲಿ ನಿಲ್ಲತಕ್ಕವುಗಳಾಗಿವೆ.

**ಕೃಷ್ಣಮೂರ್ತಿ ಹನೂರು**

ಕೃಷ್ಣಮೂರ್ತಿ ಹನೂರುರವರು ಚಾಮರಾಜನಗರ ಜಿಲ್ಲೆಯ ಹನೂರು ಗ್ರಾಮದಲ್ಲಿ ಕುಮಾರವ್ಯಾಸ ಭಾರತ ಮತ್ತು ಜೈಮಿನಿ ಭಾರತಗಳ ವಾಚಕ ಪರಂಪರೆ ಮೈಗೂಡಿಸಿಕೊಂಡಿದ್ದ ಅಳಸಿಂಗರೈಯ್ಯ ಮತ್ತು ವೆಂಕಟಲಕ್ಷ್ಮಮ್ಮ ದಂಪತಿಗಳ ಸುಪುತ್ರರಾಗಿ ೨೮–೦೮–೧೯೫೦ರಲ್ಲಿ ಜನಿಸಿದರು. ೧೯೭೩ರಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಖಾಸಗಿ ಕಾಲೇಜೊಂದರಲ್ಲಿ ಅಧ್ಯಾಪಕರಾಗಿ ವೃತ್ತಿಯನ್ನು ಆರಂಭಿಸಿ, ಮೈಸೂರು, ಬೆಂಗಳೂರು ಮತ್ತು ಚಿತ್ರದುರ್ಗ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದರು. ನಂತರ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದರು. ಹನೂರು ತಾಲ್ಲೂಕಿನ ಹೊಸಗನ್ನಡ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರವಾಗಿದೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿ, ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ವಿಶೇಷ ರೀತಿಯಲ್ಲಿ ಗುರುತಿಸಿಕೊಂಡಿದ್ದಾರೆ.

ಕೃಷ್ಣಮೂರ್ತಿ ಹನೂರು ಅವರು ಜಾನಪದದಲ್ಲಿ ಸೃಜನಶೀಲತೆಯನ್ನು ಅಳವಡಿಸಿಕೊಂಡು ಕಲಾತ್ಮಕ ಕೃತಿಗಳನ್ನು ಹೊಸಗನ್ನಡ ಸಾಹಿತ್ಯದಲ್ಲಿ ತಂದ ಕೀರ್ತಿ ಇವರದು ಹಾಗೂ ಜನಪದ ಕಥನಗೀತೆ, ಕಥೆಗಳು, ಜನಪದ ಕಾವ್ಯ ಸಂಗ್ರಹ ಮಾಡುವುದರಲ್ಲಿ ಸಿದ್ಧಹಸ್ತರಾಗಿದ್ದು, ಕನ್ನಡ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ೩೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳನ್ನು ನೋಡುವುದಾದರೆ, ಲೀಲಾವತಿ–ಪದ್ಮಾವತಿ (೧೯೭೮), ಇದು ಎಂಥಾ ಜೀವನವಯ್ಯ (೧೯೭೮), ಚಿನ್ಮಯ (೧೯೭೮), ಕತ್ತಲ ದಾರಿ ದೂರ (೧೯೮೧), ಬಾರೋ ಗೀಜಗನೆ (೧೯೮೫), ಜನಪದ ವೀರಗೀತೆಗಳು (೧೯೮೭), ನ್ಯಾಯಗಾರನ ಹೆಂಡತಿ (೧೯೮೮), ಕೇರಿಗೆ ಬಂದ ಹೋರಿ (೧೯೯೦), ಮ್ಯಾಸಬೇಡರ ಸಂಸ್ಕೃತಿ (೨೦೦೬), ಕವಿ ನಂಜುಂಡ (೧೯೯೫), ಬುಡಕಟ್ಟು ಮತ್ತು ಜನಪದ ಗೀತೆಗಳು (೧೯೯೮), ಕರ್ನಾಟಕ ಬುಡಕಟ್ಟುಗಳು (೧೯೯೮), ಸುವರ್ಣ ಜಾನಪದ (೧೯೯೮), ನಿಕ್ಷೇಪ (೨೦೦೦), ಕರ್ನಾಟಕದ ಅರಸು (೨೦೦೦), ಜಾನಪದ ಸಿದ್ಧಾಂತಗಳು (೨೦೦೦), ಬಿ. ಪುಟ್ಟಸ್ವಾಮಯ್ಯ (೨೦೦೦), ಗೆಂಡಯ್ಯನ ಒಳವು (೨೦೦೧), ದೇವಸಾಹಿತ್ಯ (೨೦೦೧), ಕತ್ತಲಲ್ಲಿ ಕಂಡ ಮುಖ (೨೦೦೨), ಹಾದಿಯೊಳಗಣ ಜ್ಯೋತಿ (೨೦೦೩), ನುಡಿಶೋಧ (೨೦೦೪), ಸಾವಿರದ ಸಿರಿ ಬೆಳಗು (೨೦೦೫), ಸುವರ್ಣ ಕಥಾ ಸಂಕಲನ (೨೦೦೬), ಐತಿಹಾಸಿಕ ಕಥನ ಗೀತೆಗಳು (೨೦೦೬), ಕಳೆದ ಮಂಗಳವಾರ ಮುಸ್ಸಂಜೆ (೧೯೯೮), ಕನ್ನಡದಲ್ಲಿ ಅನ್ಯದೇಶ್ಯ (೨೦೧೦).

ಗಿರೀಶ ಕಾರ್ನಾಡರ ನಾಟಕಗಳು (೨೦೧೧), ಜನಪದ ಮಹಾಕಾವ್ಯಗಳು (೨೦೧೦), ಮ್ಯಾಸ ಬೇಡ, ನಿರಾಕಾರ ತತ್ವದೆಡೆಗೆ (೨೦೧೧), ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನ (೨೦೧೦),

ಅಜ್ಞಾನತೊಬ್ಬನ ಆತ್ಮಚರಿತ್ರೆ (೨೦೧೨), ಕನ್ನಡ ಮೂವತ್ತು ಕಥೆಗಳು (೨೦೧೪), ಜನಪದ ರಮ್ಯ ಕಥಾನಕಗಳು (೨೦೧೪) ಹೀಗೆ ಶಿಷ್ಟ ಮತ್ತು ಜಾನಪದ ಸಾಹಿತ್ಯಕ್ಕೆ ಇವರು ನೀಡಿರುವ ಕೊಡುಗೆ ಅಪಾರವಾದದ್ದು.

**ಲೀಲಾವತಿ–ಪದ್ಮಾವತಿ** : ಚಿತ್ರದುರ್ಗದ ನಿಡುಗಲ್ ಹತ್ತಿರದ ಕ್ಯಾತಗಾನಹಳ್ಳಿಯ ಗಿರಿಯಯ್ಯ ಎಂಬ ಜಾನಪದ ಕಲಾವಿದನೊಬ್ಬ ಹೇಳಿದ ಆರು ಜನಪದ ಕಥೆಗಳ ಸಂಗ್ರಹವಾಗಿದೆ. ಲೀಲಾವತಿ ರಾಣಿಯ ಕಥೆ, ಪದ್ಮಾವತಿ ಕಥೆ, ಚೋರರ ಕಥೆ, ಗಜಪತಿರಾಯರ ಕಥೆ, ವಜ್ರಮುಕುಟರಾಯನ ಕಥೆ ಮತ್ತು ರತ್ನಾವತಿ ದೇವಿಯ ಕಥೆ. "ಇಲ್ಲಿನ ಗ್ರಾಮ್ಯಭಾಷೆ, ರಚನಾಶೈಲಿ ಮತ್ತು ಉಪಭಾಷೆಯು ಆಕರ್ಷಕವಾಗಿದೆ. ಈ ಕಥೆಗಳಲ್ಲಿ ಜಾನಪದ ಸೊಗಡು ಉಳಿದುಕೊಂಡಿದೆ. ಹಾಗೆಯೇ ಭೌಗೋಳಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಹೀಗೆ ಜೀವನದ ಎಲ್ಲಾ ಮುಖಗಳೂ ಮಾತಿನ ವಸ್ತುವಾಗಿ ವಿವರ ನೀಡುವ ಎಷ್ಟೋ ಪ್ರವಾಸ ಕಥನಗಳ ಶುಷ್ಕ ನಿರೂಪಣೆಗಿಂತ ಇದು ಬೇರೆಯಾಗಿಯೇ ಕಾಣುತ್ತದೆ. "ಈ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದ ಹಲವು ಸಂಗತಿಗಳ ಅನಾವರಣವಿದೆ ಹಾಗೂ ಜಾನಪದದ ಅಂತಸ್ಸತ್ವವನ್ನು ಶಿಷ್ಟಕ್ಕೆ ತಂದುಕೊಳ್ಳುವ ಈ ಪ್ರಮಾಣದ ಕಲೆಗಾರಿಕೆ ಆಧುನಿಕ ಕಥಾ ಸಂದರ್ಭದಲ್ಲಿ ಹೊಸದಾಗಿದೆ.

**ಕತ್ತಲ ದಾರಿ ದೂರ** : ಈ ಕೃತಿಯು ಚಿತ್ರದುರ್ಗದ ಪರಿಸರದ ಸತಿ ಪದ್ಧತಿ ಕುರಿತ ಕಥನ ಗೀತೆಗಳನ್ನು ಹೊಂದಿದೆ. ಜನಪದ ಸ್ತ್ರೀಲೋಕದ ಕಥನ ಗೀತೆಗಳ ಗುಚ್ಛವಿದು. ಮಹಾಸತಿ, ವೀರತಿಮ್ಮವ್ವ ತಾಯಿ, ಎಲ್ಲಮ್ಮ, ಸತಿ ಚೆನ್ನಮ್ಮ, ಮದಗದ ಕೆಂಚಮ್ಮ, ನಾಗಮ್ಮ, ಗುಣಸಾಗರಿ, ಕಾಡಸಿದ್ಧವ್ವ, ಧರಣಿಯಮ್ಮ, ವಲ್ಲಣದೇವಿ ಮುಂತಾದ ಸ್ತ್ರೀಯರ ಕಥೆಗಳು ಇದರಲ್ಲಿದ್ದು, ಚಿತ್ರದುರ್ಗದ ಜಿಲ್ಲೆಯ ಸ್ತ್ರೀಯರ ಸ್ಥಾನಮಾನ, ಸತಿ ಸಹಗಮನ ಪದ್ಧತಿ ಹೀಗೆ ಅಲ್ಲಿನ ಸ್ತ್ರೀ ಸಂಗತಿಗಳ ಬಗ್ಗೆ ಬೆಳಕು ಚೆಲ್ಲುವ ಕೃತಿಯಾಗಿದೆ.

**ನ್ಯಾಯಗಾರನ ಹೆಂಡತಿ** : ಚಿತ್ರದುರ್ಗದ ಮಡಿವಾಳರ ನರಸಜ್ಜ ಅವರಿಂದ ಸಂಗ್ರಹಿಸಿದ ೧೨ ಕತೆಗಳುಳ್ಳ ಸಂಗ್ರಹ ಕೃತಿ ಇದಾಗಿದ್ದು, ಇಲ್ಲಿನ ನಿರೂಪಣಾ ತಂತ್ರಗಾರಿಕೆ, ಸರಳತೆಯಿಂದ ಕೂಡಿದೆ. ಆಶಯ ಹೊಂದಿದ ಕತೆಗಳಾದ ನ್ಯಾಯಗಾರನ ಹೆಂಡತಿ, ನೂರೊಂದು ಎಲೆಯೂಟ, ಮೂರು ಮುತ್ತು ಕೊಟ್ಟವಳು, ಕೀಲು ಕುದುರೆ, ಐದು ಜನ ಹೆಂಡಿರ ಕತೆ, ಋಣಾನುಬಂಧ, ಸಂಸಾರಿ ಸೈ ಸಂನ್ಯಾಸಿ ಸೀಯ್, ಅಣ್ಣ ತಂಗಿ, ತಂದೆ–ತಾಯಿ, ಚಂದ್ರಶೇಖರ ಮಹಾರಾಜ, ಕಳ್ಳರನ್ನು ಗೆದ್ದವಳು ಮತ್ತು ನೀಲಂಜಿಕುಮಾರ ಎಂಬ ಜನಪದ ಕತೆಗಳ ಸಂಗ್ರಹವಾಗಿದೆ. "ನರಸಜ್ಜ ಹೇಳಿದ ಕತೆಗಳಲ್ಲೆಲ್ಲಾ ಸ್ತ್ರೀ ಪಾತ್ರಗಳೇ ಪ್ರಧಾನವಾಗಿ ಅವರು ಸಮಯಾಸಮಯಗಳಲ್ಲಿ ಯುಕ್ತಿ, ಚಮತ್ಕಾರ, ಜಾಣ್ಮೆ ಹಾಗೂ ಸ್ತ್ರೀ ಶಕ್ತಿಯೇ ದೊಡ್ಡದೆಂದು ನಿರೂಪಿಸುವಂತಿದೆ.

**ಮ್ಯಾಸಬೇಡರ ಸಂಸ್ಕೃತಿ :** ಮ್ಯಾಸಬೇಡರು ಅಥವಾ ವ್ಯಾಧರು ವಿಜಯನಗರದ ನಿಷ್ಠಾವಂತ ಸಾಮಂತರಾಗಿದ್ದು, ಚಿತ್ರದುರ್ಗ ಪ್ರದೇಶದಲ್ಲಿ ಅತಿ ಹೆಚ್ಚು ಕಂಡುಬರುತ್ತಾರೆ. ಈಗಲೂ ಬೇಡ ನಾಯಕರು ಮಳೆ ಬೆಳೆ ಚೆನ್ನಾಗಿ ಆದಾಗ ವರ್ಷಕ್ಕೊಮ್ಮೆ ಹಂಪೆಯ ಬಳಿ ಹೋಗಿ ದರ್ಶನ ಮಾಡಿ ಬರುವುದನ್ನು ತಿಳಿಸುತ್ತಾ, ಅವರ ಹಿನ್ನೆಲೆ ಕುರಿತ ವಿವರಣೆ ನೀಡಿದ್ದಾರೆ. ಇವರ ಮೂಲ ಹುಟ್ಟುಗಳಿಗೆ ತ್ರಿಮೂರ್ತಿಗಳೇ ಕಾರಣರೆಂದು ಪುರಾಣ ಕಥೆಗಳನ್ನು ಹೆಸರಿಸುತ್ತಾರೆ. ಮ್ಯಾಸಬೇಡರು ತಾವು ವ್ಯಾಸ ಮಹಾಕವಿಯ ಕುಲಜರು ಮತ್ತು ವಾಲ್ಮೀಕಿಯ ಗೋತ್ರದವರೆಂದು ಹೇಳುವ ದಂತಕಥೆಗಳನ್ನು ದಾಖಲಿಸಿದ್ದಾರೆ. ಮ್ಯಾಸಬೇಡರ ಆಚರಣೆ, ನಂಬಿಕೆ, ಅವರ ಮೂಲ ಶವಸಂಸ್ಕಾರ, ವಿವಾಹಪದ್ಧತಿ ಮುಂತಾದ ವಿಷಯಗಳನ್ನು ದಾಖಲಿಸಿದ್ದಾರೆ.

**ಜನಪದ ಗೀತೆಗಳು :** ವೀರ ಪುರುಷರು ಪ್ರಧಾನ ಪಾತ್ರವಾಗಿರುವ ಕಥನಗೀತೆ ಒಳಗೊಂಡ ಕೃತಿಯಾಗಿದೆ. ಗಾದ್ರಿಪಾಲ್ನಾಯಕ, ಚಿತ್ರಲಿಂಗ, ಸಿರಿಯಣ್ಣ, ಯರ್ರಪ್ಪ, ಜುಂಜಪ್ಪ, ವೀರಹನುಮಂತರಾಯ, ವೀರ ಅಭಿಮನ್ಯು, ನಿಂಗಣ್ಣನ ಸೆರೆ, ಈರ ಬಡಪ್ಪ ಮತ್ತು ರಣಸಾಗದ ಗೌಡನ ಕುರಿತಾದ ಕಥನಗೀತೆಗಳನ್ನು ಹೊಂದಿದ್ದು ೧೯೮೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಯಿತು. ಕುಂಚಟಿಗರ ಈರಬಡಪ್ಪ, ಬೇಡ ನಾಯಕರೊಂದಿಗೆ ಹೋರಾಟ ಮಾಡಿ ಮಡಿದ ಗೊಲ್ಲರ ಯಲ್ಲಪ್ಪ, ದನ ಕಾಯುವಾಗ ಹೋರಾಡಿ ಸತ್ತ ಸಿರಿಯಣ್ಣ, ಕಾಡುಗೊಲ್ಲರು ಮತ್ತು ಬೇಡ ನಾಯಕರನ್ನು ಕುರಿತ ಕಥನ ಗೀತೆಗಳು ಯಥೇಚ್ಛವಾಗಿ ಕಂಡುಬರುತ್ತದೆ.

ಹೀಗೆ ಹನೂರರ ಕಥೆ, ಕಾದಂಬರಿಗಳಲ್ಲಿ ಮುಖ್ಯವಾಗಿ ಜಾನಪದ ಸಾಹಿತ್ಯವೆ ಕಂಡುಬರುತ್ತವೆ. ಆದರೂ ಒಳ ಅಂತರಂಗದಲ್ಲಿ ಸರ್ವಗ್ರಾಹಿಯಾದ ವಾಸ್ತವಿಕತೆಯ ಬೆನ್ನು ಹತ್ತಿ ಹನೂರು ಪ್ರದೇಶದ ಮೂಲನೆಲೆಯನ್ನು ವಿವಿಧೆಡೆಯಲ್ಲಿ ಪಸರಿಸುವಂತಿದೆ. ಹೀಗೆ ಹನೂರರು ಶಿಷ್ಟ ಮತ್ತು ಜಾನಪದದ ಮೂಲಕ ಹೊಸಗನ್ನಡ ಸಾಹಿತ್ಯಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದ್ದಾರೆ.

**ಹನೂರು ಚೆನ್ನಪ್ಪ**

ಯುವ ದಲಿತ ಬರಹಗಾರರಾದ ಇವರು ಜೂನ್ ೧ ನೇ ೧೯೭೫ರಲ್ಲಿ ಹನೂರಿನ ದಂಪತಿಗಳಾದ ಹೊನ್ನಯ್ಯ ಮತ್ತು ಕಣ್ಣಮ್ಮ ಅವರ ಮಗನಾಗಿ ಜನಿಸುತ್ತಾರೆ. ಅವರ ಕೃತಿಗಳಲ್ಲಿ ಅನ್ನ ಕಥಾಸಂಕಲನ (೨೦೦೪), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ. ಇನ್ನೊಂದು 'ಬೆಲ್ಲದ ದೋಣಿ' (೨೦೦೭) ಎಂಬ ನಾಟಕ, ಕಬ್ಬಿಣದ ಕುದುರೆ (೨೦೨೫) ಕಾದಂಬರಿಯನ್ನು ರಚಿಸಿದ್ದಾರೆ.

ಈ ಕಥಾಸಂಕಲನದಲ್ಲಿ ಒಟ್ಟು ೭ ಕಥೆಗಳಿದ್ದು, ದಲಿತ ಸಂವೇದನೆ ಕೃತಿಯುದ್ದಕ್ಕೂ ಕಂಡುಬರುತ್ತದೆ. ಈ ಕೃತಿಯಲ್ಲಿ ದಲಿತರು ಹೇಗಿರುತ್ತಾರೆ? ಅವರ ಬದುಕು, ಅವರು ಅನುಭವಿಸುವ ಕಷ್ಟಗಳು, ಮಕ್ಕಳು, ಯುವಕರು ಮತ್ತು ಹಿರಿಯರ ಅನುಭವಗಳ ಅನುಭವಿಸುವ ಆಯಾಮಗಳ ಪ್ರತಿಭಟನಾ ನೆಲೆಯೂ ಇದೆ.

ಮೇಲ್ವರ್ಗದ ದಬ್ಬಾಳಿಕೆ, ಸ್ವಾತಂತ್ರ್ಯ ಪೂರ್ವದಲ್ಲಿದ್ದ ದಲಿತರ ಮೇಲಿನ ಚಿಂತನೆ, ಜೀತ ಪದ್ಧತಿ, ಅಂತರ್ಜಾತಿ ವಿವಾಹಗಳು ಮತ್ತು ಅದರಿಂದುಂಟಾಗುವ ಪರಿಣಾಮ ಇವೆಲ್ಲವುಗಳ ಜೊತೆಗೆ, ಅನ್ನಕ್ಕಾಗಿ ಬಡಜನರು ಪಡುವ ಪಾಡನ್ನು, ಹಳ್ಳಿಯಲ್ಲಿ ಬದುಕನ್ನು ಸಾಗಿಸುವ ದಲಿತರ ಜೀವನ ನಿದರ್ಶನವನ್ನು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಹೀಗೆ ದಲಿತ ಸಾಹಿತ್ಯ ಲೋಕಕ್ಕೆ ಭರವಸೆಯನ್ನು ಮೂಡಿಸುವ ಯುವ ಬರಹಗಾರರಲ್ಲಿ ಹನೂರು ಚೆನ್ನಪ್ಪನವರು ಮುಂಚೂಣಿಯಲ್ಲಿದ್ದು, ಹೊಸಗನ್ನಡ ಸಾಹಿತ್ಯಕ್ಕೆ ಅವರ ಕೊಡುಗೆ ಅನನ್ಯವಾಗಿದೆ.

**ಸ್ವಾಮಿ ಪೊನ್ನಾಚಿ**

ಸ್ವಾಮಿ ಪೊನ್ನಾಚಿ ಎಂದೇ ಪ್ರಸಿದ್ಧರಾಗಿರುವ ಕೆ.ಎಸ್. ಮಹದೇವಸ್ವಾಮಿರವರು ಕನ್ನಡ ಸಾಹಿತ್ಯ ಲೋಕದಲ್ಲಿ ಪ್ರಯೋಗಶೀಲ ಕಥೆಗಾರರಾಗಿ ಕಂಡುಬರುತ್ತಾರೆ. ಇವರ ಪೂರ್ಣ ಹೆಸರು ಕಕ್ಕೆ ಹೊಲ ಶಿವಣ್ಣ ಮಹದೇವಸ್ವಾಮಿ. ಇವರು ೧೯೮೫ ನವೆಂಬರ್, ೨೫ ರಂದು ಹನೂರು ತಾಲ್ಲೂಕಿನ ಪೊನ್ನಾಚಿ ಎಂಬ ಗ್ರಾಮದಲ್ಲಿ ಶ್ರೀ ಶಿವಣ್ಣ ಹಾಗೂ ಶ್ರೀಮತಿ ಗೌರಮ್ಮ ದಂಪತಿಗಳ ಎರಡನೆಯ ಪುತ್ರರಾಗಿ ಜನಿಸಿದ್ದಾರೆ. ಬಿಎ ಹಾಗೂ ಎಂಎ ಕನ್ನಡ ಪದವಿಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರಿನಲ್ಲಿ ಪಡೆದಿದ್ದಾರೆ. ಇವರು ಆರಕ್ಷಕ ಹುದ್ದೆಯನ್ನು ನಿರಾಕರಿಸಿ, ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಕ್ಷಕ ವೃತ್ತಿಯನ್ನು ನಡೆಸುತ್ತಾ ಕನ್ನಡ ಸಾಹಿತ್ಯ ಲೋಕದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸ್ವಾಮಿ ಪೊನ್ನಾಚಿ ಅವರು ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮ ವಿಶೇಷ ಪ್ರತಿಭೆಯ ಮೂಲಕ ಗುರುತಿಸಿಕೊಂಡಿದ್ದು, ೨೦೧೬ರಲ್ಲಿ "ಸಾವೊಂದನ್ನು ಬಿಟ್ಟು' ಎಂಬ ಕವನಸಂಕಲನ, ೨೦೧೮ರಲ್ಲಿ 'ಧೂಪದ ಮಕ್ಕಳು', 'ದಾರಿ ತಪ್ಪಿಸುವ ಗಿಡ' (೨೦೧೪) ಎಂಬ ಕಥಾಸಂಕಲನಗಳನ್ನು 'ಕಾಡು ಹುಡುಗನ ಹಾಡು ಪಾಡು' (೨೦೨೩) ಅನುಭವ ಕಥನವನ್ನು ರಚಿಸಿದ್ದಾರೆ.

**ಧೂಪದ ಮಕ್ಕಳು :** 'ಧೂಪದ ಮಕ್ಕಳು' ಕಥೆಯಲ್ಲಿ ಚಾಮರಾಜನಗರ ಜಿಲ್ಲೆಯ ಅರಣ್ಯ ಪ್ರದೇಶದ ತಪ್ಪಲಿನ ಗಿರಿಜನರ ಬಡತನದ ಬದುಕಿನ ಚಿತ್ರಣವು ಕಂಡುಬರುತ್ತದೆ. ಬಡತನ ಹಾಗೂ ಕುಡಿತದ ಚಟದಿಂದ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ, ಶ್ರೀ ಮಲೆಮಹದೇಶ್ವರ ಕ್ಷೇತ್ರದ ತಾಳು ಬೆಟ್ಟದಲ್ಲಿ ಧೂಪ ಮಾರಲು ಕಳುಹಿಸುವ ತಂದೆ ತಾಯಿಗಳು ಒಂದು ಕಡೆ ಕಂಡುಬಂದರೆ, ಹಣದ ಆಸೆ ಹಾಗೂ ಹಸಿವಿನ ಸಂಕಟಕ್ಕಾಗಿ ಹತ್ತಿರದ ಹೋಟೆಲ್ ಆಳುಗಳಿಂದ ಚಿಕ್ಕ ಹೆಣ್ಣು ಮಕ್ಕಳು ವಿಧಿ ಇಲ್ಲದೆ ದೇಹದ ಮೇಲೆಲ್ಲಾ ಕೈಯಾಡಿಸಿಕೊಳ್ಳುತ್ತಿರುವ ಭೀಕರ ದೃಶ್ಯ ಅಸಹಾಯಕ ಚಿತ್ರಣ ಮತ್ತೊಂದು ಕಡೆ ಕಂಡುಬರುತ್ತದೆ. ಬಡಜನರ ಮಾನವು ಅವರಾಡುವ ಮಾತು ಹಾಗೂ ಉಡುವ ಬಟ್ಟೆಯಿಂದ ನಿರ್ಧರಿತವಾಗುತ್ತದೆ. ಆದರೆ ಗಿರಿಜನರು ಹಾಕಿಕೊಳ್ಳಲು ಉಡುಪುಗಳಲ್ಲದೆ ಮೈ–ಕೈ ಕಾಣುವ ಹಾಗೆ

ಹರಕಲು ಬಟ್ಟೆಯಲ್ಲಿಯೇ ನಿರ್ಭಯವಾಗಿ ಮತ್ತು ಯಾವುದೇ ಸಂಕೋಚನಗಳಿಲ್ಲದೆ, ಊರೆಲ್ಲಾ ತಿರುಗುತ್ತಾರೆ. ಆದರೆ ತಮ್ಮ ಸಂಸ್ಕೃತಿಗೆ ಅನುಗುಣವಾಗಿ ಮೈ–ಕೈ ಕಾಣುವ ಹಾಗೆ ಅರೆ–ಬರೆ ಬಟ್ಟೆ ಧರಿಸುವ ವಿದೇಶಿಯರು ಮತ್ತೊಂದೆಡೆ ಮುಖಾಮುಖಿಯಾಗುತ್ತಾರೆ. ಆಧುನಿಕ ಪ್ರಪಂಚವು ಎಷ್ಟು ಬೇಗ ಅಭಿವೃದ್ಧಿ ಹೊಂದಿದ್ದರೂ ಕಾಡಂಚಿನ ಜನರು ಅಭಿವೃದ್ಧಿ ಪಥದತ್ತ ಸಾಗುವುದು ಕಷ್ಟ ಸಾಧ್ಯ.

**ದಾರಿ ತಪ್ಪಿಸುವ ಗಿಡ :** ೨೦೨೩ರಲ್ಲಿ ಈ ಕಥಾಸಂಕಲನ ಪ್ರಕಟವಾಗಿದೆ. ಈ ಸಂಕಲನಕ್ಕೆ ತ್ರಿವೇಣಿ ಶೆಲ್ಲಿಕೇರಿ ಸಾಹಿತ್ಯ ಪುರಸ್ಕಾರ, ಡಾ. ಬೆಸಗರಹಳ್ಳಿ ರಾಮಣ್ಣ ಕಥಾ ಪ್ರಶಸ್ತಿ ಲಭಿಸಿದೆ. ದಾರಿ ತಪ್ಪಿಸುವ ಗಿಡ ಕಥಾಸಂಕಲನವು ಒಟ್ಟು ೧೦ ಕಥೆಗಳನ್ನು ಒಳಗೊಂಡಿದ್ದು, ನಾಮ್ದರೆ ಜೇನು ಹದಿನಾರು ಕಂಬದ ಮನೆ, ಗೌರಿ, ದಾರಿ ತಪ್ಪಿಸುವ ಗಿಡ, ಇಟ್ಟರೆ ಸಗಣಿಯಾದೆ, ಕರಿಕಲ್ಲು, ಗೋಣಿಮರದ ಕೊಂಬೆ, ನಿಂಬೆ ಮತ್ತು ಧೂತಳದ ಪಾಕಿಟ್ಟು, ಸಿದ್ದವ್ವ ಮತ್ತು ತಂಬೂರಿ ಮಾದ, ದೇವರ ಕನಕಿ, ಕಥೆಗಳನ್ನು ಒಳಗೊಂಡಿದೆ. ಗೋಣಿ ಮರದ ಕೊಂಬೆ ಹಾಗೂ ದಾರಿ ತಪ್ಪಿಸುವ ಗಿಡ ಎರಡೂ ಕಥೆಗಳಲ್ಲಿ ನಡುರಾತ್ರಿಯ ವೇಳೆ ಬಸ್ಸು ಇಳಿದು ಸುತ್ತಲ ವಿವರಗಳು ಹಾಗೂ ಕಥೆಯಲ್ಲೂ ರಾತ್ರಿಯ ಹೊತ್ತಿನಲ್ಲಿ ಹೊಲದ ಕಾವಲು ಕಾಯುತ್ತಾ ಕೂತಾಗ ಶಿವನಪ್ಪ ಅರಿವಿಗೆ ತಂದುಕೊಳ್ಳುವ ವಿವರಗಳೂ ಇವೆ. ಇಟ್ಟರೆ ಸಗಣಿಯಾದೆ, ಸಿದ್ದವ್ವ ಮತ್ತು ತಂಬೂರಿ ಮಾದ ಇಂಥ ಕಥೆಗಳಲ್ಲಿ ತಳವರ್ಗಕ್ಕೆ ಸೇರಿದ ಪಾತ್ರಗಳು, ಅವರು ಬಳಸುವ ಭಾಷೆಯ ವೈವಿಧ್ಯತೆಯನ್ನು ತಿಳಿಸುತ್ತದೆ. ಗೌರಿ ಹಾಗೂ ನಿಂಬೆ ಮತ್ತು ಧೂಳತದ ಪಾಕಿಟ್ಟು ಎರಡೂ ಕಥೆಗಳು ಒಂದೇ ವಿಷಯದ ಎರಡು ಮಗ್ಗಲುಗಳನ್ನು ತೋರುತ್ತವೆ. ಈ ಎರಡೂ ಕಥೆ ವ್ಯವಸ್ಥೆಯೊಂದು ನಂಬಿಕೆಯೆಂಬ ಉಪಕರಣದ ಮೂಲಕ ಬಲಿ ಪಡೆಯುವವರನ್ನೂ ಬಲಿಯಾಗುವವರನ್ನು ನಿಯಂತ್ರಿಸುವುದನ್ನೇ ತೋರುತ್ತದೆ. ಅಂದರೆ ಪಾತ್ರಗಳಿಗಿಂತ ಅವರ ನಂಬಿಕೆಗಳನ್ನು ರೂಢಿಸಿದ ಪರಿಸರ ಶಕ್ತಿವಂತ ಅನ್ನಿಸುತ್ತದೆ.

'ಕರೀ ಕಲ್ಲು ಕ್ವಾರಿ' ನಿರೂಪಣೆಯೇ ಪ್ರಧಾನವಾದ ಕಥೆಯಾಗಿದ್ದರೂ ಹದಿನಾರು ಕಂಬದ ಮನೆಯ ಇನ್ನೊಂದು ಮಗ್ಗಲು ಅನ್ನಿಸುತ್ತದೆ. ಇವೆರಡೂ ಕಥೆಗಳಲ್ಲಿ ಬಂಡವಾಳ ಮತ್ತು ಆಡಳಿತ ವ್ಯವಸ್ಥೆಯ ಮನೋಧರ್ಮದ ಶಕ್ತಿಯ ಎದುರು ದುರ್ಬಲವಾದ ಪಾತ್ರಗಳನ್ನು ಇಲ್ಲಿ ಕಾಣಬಹುದಾಗಿದೆ. ಗೌರಿ ಕಥೆಯಲ್ಲಿರುವಂಥ ಪಾತ್ರಗಳ ಬದುಕಿನ ಕಥೆ ನಾಮ್ದರೆ ಜೇನುವಿನಲ್ಲಿ ನಿಸರ್ಗದ ನಿಷ್ಕರುಣೆ, ಮನುಷ್ಯರು ಆಸೆ, ಆತಂಕ, ಆಕಸ್ಮಿಕ ಎಲ್ಲವೂ ಬೆರೆತ ಈ ಕಥೆ ಕಟ್ಟುಪಾಡು, ಲೈಂಗಿಕತೆ ಸೇಡಿನ ಆಸೆ, ಎಲ್ಲವೂ ಬಹಳ ಆಕಸ್ಮಿಕ ಎಲ್ಲವೂ ಬೆರೆತ ಈ ಕಥೆ ಕಟ್ಟುಪಾಡು, ಲೈಂಗಿಕತೆ ಸೇಡಿನ ಆಸೆ, ಎಲ್ಲವೂ ಬಹಳ ಮಟ್ಟಿಗೆ ನಿರೂಪಣೆ ಆಗಿವೆ. ಒಟ್ಟಾರೆಯಾಗಿ ಈ ಕಥೆಗಳು ಸಾಮಾಜಿಕ ವ್ಯವಸ್ಥೆಯ ವಿವಿಧ ಮುಖಗಳನ್ನು ನಿರೂಪಿಸುವಂತಿವೆ.

**ಬಿ. ಚಿಕ್ಕಬಸವಯ್ಯ ಮಣಗಳ್ಳಿ**

ಇವರು ಹನೂರು ತಾಲ್ಲೂಕಿನ ಮಣಗಳ್ಳಿ ಎಂಬ ಗ್ರಾಮದಲ್ಲಿ ಜನಿಸಿದ್ದು, ಕವನಸಿರಿ, ನಿಮ್ಮೊಡನೆ ಹತ್ತು ವರ್ಷಗಳು ಎಂಬ ಎರಡು ಕೃತಿಗಳನ್ನು ಸಂಪಾದಿಸಿದ್ದಾರೆ. ಕವನಸಿರಿ ಇದೊಂದು ಸಂಯುಕ್ತ ಕವನ ಸಂಕಲನವಾಗಿದ್ದು, ಟಿ. ನರಸೀಪುರ ಕೆ.ಆರ್. ಷಣ್ಮುಖಸ್ವಾಮಿ ಮತ್ತು ಚಿಕ್ಕಬಸವಯ್ಯನವರು ಸೇರಿ ಬರೆದ ಕವನ ಸಂಕಲನವಾಗಿದೆ. ಇದರಲ್ಲಿ ಒಟ್ಟು ೨೪ ಕವನಸಂಕಲನಗಳು ಕಂಡುಬರುತ್ತದೆ. ನಿಮ್ಮೊಡನೆ ಹತ್ತು ವರ್ಷಗಳು (ಸಂಪಾದಿತ) ತಿರುಮಕೂಡಲು ನರಸೀಪುರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ೧೯೮೯ ರಿಂದ ೧೯೯೮ ರ ಅವಧಿಯಲ್ಲಿ ಹಮ್ಮಿಕೊಂಡ ಚಟುವಟಿಕೆಗಳ ವಿವರಗಳನ್ನು ಇಲ್ಲಿ ಸಂಕಲಿಸಲಾಗಿದೆ.

**ಡಿ. ಮಹದೇವ ಕುಮಾರ್**

ಹನೂರು ತಾಲ್ಲೂಕಿನ ಮಣಗಳ್ಳಿಯಲ್ಲಿ ೧೫-೦೫-೧೯೭೫ರಲ್ಲಿ ದೊಡ್ಡಯ್ಯ ಮತ್ತು ಜಡೇಮಾದಯ್ಯರವರ ಪುತ್ರರಾಗಿ ಜನಿಸಿದ್ದಾರೆ. ಇವರು ವಿಜ್ಞಾನ ವಿಭಾಗದಲ್ಲಿ ಪದವಿಯನ್ನು ಪಡೆದು ಶಿಕ್ಷಕ ವೃತ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕೋರೆಗಾವ್ ವಿಜಯೋತ್ಸವ (೨೦೧೪) ಎಂಬ ಕೃತಿಯನ್ನು ರಚಿಸಿದ್ದಾರೆ. ೧೮೧೮ ಜನವರಿ ೧ ರಿಂದ ಮಹರ್ ವೀರಯೋಧರು ಕೇವಲ ೫೦೦ ಜನ ಸೈನಿಕರು, ೨೫,೦೦೦ ಪೇಶ್ವೆ ಸೈನಿಕರನ್ನು ಸದೆ ಬಡಿದ ಐತಿಹಾಸಿಕ ಘಟನೆಯನ್ನು ಇಲ್ಲಿ ಲೇಖಖರು ದಾಖಲಿಸಿದ್ದಾರೆ. ಇದೊಂದು ಅಸ್ಪೃಶ್ಯ ಜನಾಂಗದ ಸಾಹಸ ವೀರಗಾಥೆಯಾಗಿದೆ. ಈ ಕೃತಿಗೆ ಎನ್. ಮಹೇಶ್‌ರವರು ಮುನ್ನುಡಿ ಬರೆದಿದ್ದು, ಈ ಕೃತಿ ಗಾತ್ರದಲ್ಲಿ ಕಿರಿದಾದರೂ ಅನೇಕ ಮಹತ್ತರವಾದ ಚಾರಿತ್ರಿಕ ಸತ್ಯಗಳನ್ನು ಅಂಕಿ ಅಂಶಗಳ ಸಮೇತ ನಿರೂಪಿಸುವಲ್ಲಿ ತುಂಬಾ ಯಶಸ್ವಿಯಾಗಿದೆ.

**ಜಿ. ಪಳನಿಸ್ವಾಮಿ ಜಾಗೇರಿ**

ಹನೂರು ತಾಲ್ಲೂಕಿನ ಗೋಪಿನಾಥ ಎಂಬ ಗ್ರಾಮದಲ್ಲಿ ಗೋವಿಂದಸ್ವಾಮಿ ನಾಯ್ಕ ಮತ್ತು ಶ್ರೀಮತಿ ಭೀಮಬಾಯಿ ಅವರ ಮಗನಾಗಿ ೦೧-೦೬-೧೯೭೮ರಲ್ಲಿ ಜನಿಸಿದ್ದಾರೆ. ಇವರು ಬಿ.ಎ., ಬಿ.ಪಿಎಡ್. ಪದವಿಯನ್ನು ಪಡೆದಿದ್ದು, ಸೊರಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕವಿಗಳಾದ ಇವರು ತಮಿಳು, ಸಂಸ್ಕೃತ, ಲಂಬಾಣಿ, ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ಪರಿಣಿತಿಯನ್ನು ಹೊಂದಿದ್ದು, ೨೦೧೩-೧೪ನೇ ಸಾಲಿನ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಪಳನಿಸ್ವಾಮಿ ಜಾಗೇರಿಯವರು ಮಕ್ಕಳ ಸಾಹಿತ್ಯ ಮತ್ತು ದೈಹಿಕ ಶಿಕ್ಷಣಕ್ಕೆ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದು, ಕ್ರೀಡಾಲೋಕ, ಮಕ್ಕಳ ಕಾವ್ಯಲೋಕ (೨೦೦೯), ದೈಹಿಕ ಶಿಕ್ಷಣ ೧ ಮತ್ತು ೨ ನೇ (ಹಂತ) ತರಗತಿ ಮಕ್ಕಳಿಗೆ ೨೦೦೯ ಚಟುವಟಿಕೆಗೆ ಆಧಾರಿತ ಆಟದ ಪಾಠಗಳು, ದೈಹಿಕ ಶಿಕ್ಷಣ ೩ ಮತ್ತು ೪ ನೇ ಹಂತ (ಹಂತ) ತರಗತಿ ಮಕ್ಕಳಿಗೆ ೨೦೦೯ ಚಟುವಟಿಕೆಗೆ ಆಧಾರಿತ ಆಟದ ಪಾಠಗಳು, ೨೦೦೯ ರಲ್ಲಿ ಮತ್ತು ೫ ಈ ಎರಡೂ ಪಠ್ಯಗಳು ಚಾಮರಾಜನಗರ ಜಿಲ್ಲಾ ಪೈಲಟ್ ಪ್ರಾಜೆಕ್ಟ್ ಆಗಿ ಆಯ್ಕೆಯಾಗಿರುತ್ತವೆ. ಈ ಕೃತಿಗಳ ಬಗ್ಗೆ ಕನ್ನಡಪ್ರಭ ಶಿಕ್ಷಣ ಕೌಸ್ತುಭ, ಶಿಕ್ಷಣ

ವಾರ್ತೆ ಪತ್ರಿಕೆಗಳು ವಿಶೇಷ ಲೇಖನಗಳನ್ನು ಪ್ರಕಟಿಸಿವೆ. ಲಂಬಾಣಿಗಳ ಪಾರಂಪರಿಕ ಬದುಕು (೨೦೧೨) ಎಂಬ ಈ ಕೃತಿಯು ಲಂಬಾನಿ ಜನರ ಮೂಲ ಪರಂಪರೆ ಅವರ ನಂಬಿಕೆ ಆಚರಣೆಗಳ ಕುರಿತಂತೆ ಚರ್ಚಿಸಿದ್ದಾರೆ.

**ಜಯಪ್ರಕಾಶ ಪಿ. ಪೊನ್ನಾಚಿ**

ಜಯಪ್ರಕಾಶ ಪೊನ್ನಾಚಿ ಅವರು ೧೩-೦೭-೧೯೮೫ರಲ್ಲಿ ಹನೂರು ತಾಲ್ಲೂಕಿನ ಪೊನ್ನಾಚಿ ಗ್ರಾಮದಲ್ಲಿ ಪುಟ್ಟಪ್ಪ ಮತ್ತು ರಾಜಮ್ಮ ದಂಪತಿಗಳ ಮಗನಾಗಿ ಜನಿಸಿದ್ದಾರೆ. ಇವರು ಬಿ.ಎ., ಬಿ.ಎಡ್. ಪದವಿಯನ್ನು ಪಡೆದಿದ್ದು, ಪ್ರಾಥಮಿಕ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ಮಣ್ಣಿಗೆ ಬಿದ್ದ ಮಳೆ ಕವನ (೨೦೦೪) ಅನ್ನು ರಚಿಸಿದ್ದು 'ಸಾಹಿತ್ಯಸಿರಿ' ಪ್ರಶಸ್ತಿಯನ್ನು ಕೂಡ ಪಡೆದುಕೊಂಡಿದ್ದಾರೆ. ಇವರು ಶಿಕ್ಷಕರಾಗಿ ಕನ್ನಡ ಸಾಹಿತ್ಯ ಸೇವೆಯಲ್ಲಿಯೂ ತೊಡಗಿಕೊಂಡಿರುವುದು ಸ್ವಾಗತಾರ್ಹವಾಗಿದ್ದು, ಇವರ ಮಣ್ಣಿಗೆ ಬಿದ್ದ ಮಳೆ ಕರ್ನಾಟಕದ ರಾಜಕೀಯ, ಆರ್ಥಿಕ ಚಿತ್ರಣವನ್ನು ನಿರೂಪಿಸುವ ಗಣಿಕಾರಿಕೆಯ ಕುರಿತಂತೆ ಕವಿತೆಗಳನ್ನು ಬರೆದಿದ್ದು, ನೈಸರ್ಗಿಕ ಸಂಪತ್ತನ್ನು ಅಕ್ರಮವಾಗಿ ಬಗೆಯುವಿಕೆಯ ವಿರುದ್ಧದ ಆತಂಕವನ್ನು, ಆಕ್ರೋಶವನ್ನು ಹಾಗೂ ಹಸಿವಿನ ಸಂಕಟವನ್ನು, ಗಾಯದ ನೋವನ್ನು ಅರಿತವಾಗಿಯೇ ಖಂಡಿಸುವ ಕವಿತೆಗಳನ್ನು ರಚಿಸಿದ್ದಾರೆ.

**ಡಾ. ಕೇಶವನ್ ಪ್ರಸಾದ್**

ಹನೂರು ತಾಲ್ಲೂಕಿನ ಉದ್ದನೂರು ಗ್ರಾಮದಲ್ಲಿ ೦೫-೦೧-೧೯೫೮ರಲ್ಲಿ ಜನಿಸಿದ್ದು, ಎಂ.ಎ. (ಜಾನಪದ), ಪಿಎಚ್.ಡಿ. ಪದವಿಯನ್ನು ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪಡೆದಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿಯಲ್ಲಿ ವಿಭಾಗದ ಮುಖ್ಯಸ್ಥರಾಗಿ ಹಾಗೂ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ದೆಹಲಿ ವಿಶ್ವವಿದ್ಯಾಲಯ, ಏಷಿಯಾದ ಅಂತರಾಷ್ಟ್ರೀಯ ಚರಿತ್ರೆಕಾರರ ಸಂಘದ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಹಾಗೆಯೇ ಸಾಹಿತ್ಯ ಕೃಷಿಯಲ್ಲಿಯು ತಮ್ಮನ್ನು ತೊಡಗಿಸಿಕೊಂಡು ಕಪ್ಪೆ ಹೊಲೆಯರ ಉಪಸಂಸ್ಕೃತಿ (೧೯೯೩), ಡಾ. ಹೆಚ್.ಎಲ್. ನಾಗೇಗೌಡರ ಬದುಕು-ಬರಹ (೧೯೯೫), ಜನಪದ ಕಲೆಗಳ ವಿಶ್ವಕೋಶ (ಸಂಪಾದನ ಕೃತಿ) ೧೯೯೫, ಮಲೆ ಮಾದೇಶ್ವರ ಕಾವ್ಯ (ಸಂಪಾದಿತ) (೧೯೯೭), ಬಿಳಿಗಿರಿರಂಗನ ಬುಡಕಟ್ಟು ಮಹಾಕಾವ್ಯ (ಸಂಪಾದಿತ) (೨೦೦೫), ಬುಡಕಟ್ಟು ವಿಸ್ಮಯ (೨೦೦೫), ಬುಂಡೆ ಬೆಸ್ತರು (೨೦೧೦), ಸೋಲಿಗರ ನುಡಿಯ ಸಾಂಸ್ಕೃತಿಕ ಪದಕೋಶ (೨೦೧೧), ಸೋಲಿಗರು (೨೦೧೧) ಈ ಕೃತಿಗಳ ಜೊತೆಗೆ ಲೇಖಕರ ೫೦ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ಪ್ರಕಟಗೊಂಡಿವೆ.

ಒಟ್ಟಾರೆಯಾಗಿ ಈ ತಾಲ್ಲೂಕು ಸಾಹಿತ್ಯದ ಸಮೃದ್ಧವಾದ ನೆಲೆಯಾಗಿದೆ. ಸಾಹಿತಿಗಳು ತಮ್ಮ ಕೃತಿಗಳ ರಚನೆಯ ಮೂಲಕ ಸಮಾಜ, ಸಾಮಾಜಿಕ, ಧಾರ್ಮಿಕ ವಿಚಾರಗಳ ಸತ್ಯಾಸತ್ಯತೆಯನ್ನು ಸಹೃದಯರಿಗೆ

ತಿಳಿಸಿಕೊಡುವ ಮುಖಾಂತರ ಸಮಾಜದ ಏಳ್ಗೆಗೆ ಕಾರಣೀಭೂತರಾಗುತ್ತಿದ್ದು, ಇಂದಿನ ಯುವ ಸಮುದಾಯವು ತಮ್ಮ ಹಿರಿಯರ ಸಾಧನೆಗಳು ಹಾಗೂ ತಾವು ಅನುಸರಿಸಿ ಆಚರಿಸಿದ ನೀತಿಯುತ ಬದುಕನ್ನು, ಅನುಭವಗಳನ್ನು ಸಾಹಿತ್ಯ ಕೃತಿಗಳ ಮೂಲಕ ಈ ತಾಲ್ಲೂಕಿನ ಸಾಹಿತಿಗಳನ್ನು ತಮ್ಮ ಕೃತಿಗಳ ಮೂಲಕ ಸಾದರಪಡಿಸಿದ್ದು, ಕನ್ನಡ ಸಾಹಿತ್ಯದ ಬೆಳವಣಿಗೆಯ ಜೊತೆಗೆ ಸಮಾಜದ ಬೆಳವಣಿಗೆಗೂ ಇವರು ಕೊಟ್ಟ ಕೊಡುಗೆ ಅಪಾರವಾದಂತವಾಗಿದೆ.

## ಪರಾಮರ್ಶನ ಗ್ರಂಥಗಳು


೧. ಡಾ. ಹನೂರು ಕೃಷ್ಣಮೂರ್ತಿ : ನುಡಿಶೋಧ ; ಪ್ರ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಮುನ್ನುಡಿ.

೨. ಡಾ.ಹನೂರು ಕೃಷ್ಣಮೂರ್ತಿ:ಕಳೆದ ವಾರ ಮುಸ್ಸಂಜೆ ; ಪ್ರ. ರೂಪ ಪ್ರಕಾಶನ, ಮೈಸೂರು, ೨೦೦೭.

೩. ಡಾ.ಹನೂರು ಕೃಷ್ಣಮೂರ್ತಿ:ಅಜ್ಞಾತನೊಬ್ಬನ ಆತ್ಮಚರಿತ್ರೆ ;ಪ್ರ.ಅಂಕಿತ ಪುಸ್ತಕ,ಬೆಂಗಳೂರು, ೨೦೧೨.

೪. ಹನೂರು ಚೆನ್ನಪ್ಪ : ಅನ್ನ ; ಅಭಿರುಚಿ ಪ್ರಕಾಶನ, ಮೈಸೂರು, ೨೦೦೪.

೫. ಮಲೆಯೂರು ಗುರುಸ್ವಾಮಿ (ಪ್ರ.ಸಂ.) ಸಾಹಿತ್ಯ ಸುವರ್ಣಾವತಿ ; ಪ್ರ. ಮಹಾಮನೆ ಪ್ರಕಾಶನ, ಮೈಸೂರು, ೨೦೧೬.

೬. ಸ್ವಾಮಿ ಪೊನ್ನಾಚಿ : ದಾರಿ ತಪ್ಪಿಸುವ ಗಿಡ (ಕಥಾಸಂಕಲನ) ; ಪ್ರ. ವೈಷ್ಣವಿ ಪ್ರಕಾಶನ, ಕೆ. ಗುಡದಿನ್ನಿ, ಮಾನ್ವಿ ತಾಲ್ಲೂಕು, ರಾಯಚೂರು, ೨೦೨೪.

೭. ಸ್ವಾಮಿ ಪೊನ್ನಾಚಿ: ಧೂಪದ ಮಕ್ಕಳು (ಕಥಾಸಂಕಲನ) ; ಛಂದ ಪುಸ್ತಕ, ಬೆಂಗಳೂರು, ೨೦೧೮.

೮. ಸ್ವಾಮಿ ಪೊನ್ನಾಚಿ:ಕಾಡು ಹುಡುಗನ ಹಾಡು ಪಾಡು ;ಅಮೂಲ್ಯ ಪ್ರಕಾಶನ,ಬೆಂಗಳೂರು, ೨೦೨೪.